146 ನೇ ಅಧಿವೇಶನ
ನಿ-72
ಕ್ರ. 55 ಕಂಪ್ಯೂಟರ್

**ವಿಧಾನಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಟಿ.ಶ್ರೀಕಂಠೇಗೌಡ, ಶ್ರೀ ಮರಿತಿಬ್ಬೇಗೌಡ, ಶ್ರೀ ಅರುಣ ಶಹಾಪುರ, ಶ್ರೀ ಎಸ್.ವ್ಹಿ.ಸಂಕನೂರ, ಶ್ರೀ ಚಿದಾನಂದ.ಎಂ.ಗೌಡ ಹಾಗೂ ಶ್ರೀ ಪುಟ್ಟಣ್ಣ ಇವರುಗಳು ನಿಯಮ 72ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಹೇಳಿಕೆ**

| | |
|---|---|
| ವಿಷಯ: | 1997 ರಲ್ಲಿ ಜಾರಿಮಾಡಿದ ಅನುದಾನ ಸಂಹಿತೆಯಂತೆ 7 ವರ್ಷ ಪೂರೈಸಿದ ರಾಜ್ಯ ಎನ್.ಸಿ.ವಿ.ಟಿ. ಮಾನ್ಯತೆ ಖಾಸಗಿ ಐ.ಟಿ.ಐ ಗಳಿಗೆ ಸಹಾಯಾನುದಾನವನ್ನು 2010 ರಲ್ಲಿ ಸ್ಥಗಿತಗೊಳಿಸಿದ್ದು ತದನಂತರ ಅದೇ ಸಾಲಿನಲ್ಲಿ ಜಾರಿ ಮಾಡಿದ ವಿದ್ಯಾರ್ಥಿ ಕೇಂದ್ರೀತ ಅನುದಾನವೆಂಬ ಗೌರವ ಧನ ಪದ್ಧತಿ ಹಿಂಪಡೆದು ಪರಿಷ್ಕೃತ ವೇತನಾನುದಾನ (ಸಿಬ್ಬಂದಿ ಆಧಾರಿತ) ಪದ್ಧತಿ ಮುಂದುವರೆಸಬೇಕೆಂಬ ವಿಷಯವನ್ನು ನಿಯಮ 72ರಲ್ಲಿ ಮಾನ್ಯ ಉನ್ನತ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರ ಗಮನ ಸೆಳೆಯಬಯಸುತ್ತೇನೆ. |

*******

2000ನೇ ಸಾಲಿನಲ್ಲಿ 7 ವರ್ಷ ಎನ್.ಸಿ.ವಿ.ಟಿ ಸಂಯೋಜನೆ ಪೂರೈಸಿದ 103 ಸಂಸ್ಥೆಗಳಿಗೆ ಸರ್ಕಾರಿ ಆದೇಶ ಸಂಖ್ಯೆ: ಕಾಇ 284 ಇಟಿಐ 2005 ಬೆಂಗಳೂರು, ದಿನಾಂಕ: 21.08.2010ರಲ್ಲಿ ಕೊನೆಯ ಬಾರಿಗೆ ವೇತನಾನುದಾನ ನೀಡಲು ಆದೇಶಿಸಿ, ಇನ್ನು ಮುಂದೆ ಯಾವುದೇ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು 1997 ರ ಅನುದಾನ ಸಂಹಿತೆಯಡಿ ವೇತನ ಸಹಾಯಾನುದಾನಕ್ಕೆ ಒಳಪಡಿಸತಕ್ಕದ್ದಲ್ಲವೆಂದು ಷರತ್ತು ವಿಧಿಸಲಾಗಿದೆ. ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿಯ ಮೇರೆಗೆ ಹೊರಡಿಸಲಾಗಿರುತ್ತದೆ. ಆದ್ದರಿಂದ ದಿನಾಂಕ: 21.08.2010ರಿಂದ ರಾಜ್ಯದ ಯಾವುದೇ ಅನುದಾನ ರಹಿತ ಐ.ಟಿ.ಐ ತರಬೇತಿ ಸಂಸ್ಥೆಗಳನ್ನು ಸಿಬ್ಬಂದಿ ಆಧಾರಿತ ವೇತನ ಸಹಾಯಾನುದಾನಕ್ಕೆ ಒಳಪಡಿಸಲು ಅವಕಾಶಗಳಿರುವುದಿಲ್ಲ.

2007-08ನೇ ಸಾಲಿನ ಆಯವ್ಯಯದಲ್ಲಿ ಗುಣಮಟ್ಟದ ವೃತ್ತಿ ಶಿಕ್ಷಣ ತರಬೇತಿಯನ್ನು ಉತ್ತೇಜಿಸಲು "ವಿದ್ಯಾರ್ಥಿ ಕೇಂದ್ರೀಕೃತ ಸಹಾಯಾನುದಾನ" ನೂತನ ನೀತಿಯನ್ನು ಇದುವರೆಗೆ ಅನುದಾನ ಪಡೆಯದಿರುವ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಅಳವಡಿಸಲು ಘೋಷಿಸಿದ ಹಿನ್ನೆಲೆಯಲ್ಲಿ, ಪ್ರಸ್ತುತ ಜಾರಿಯಲ್ಲಿರುವ ಅನುದಾನ ಸಂಹಿತೆಯನ್ನು ಪರಿಷ್ಕರಿಸಿ ಶಿಫಾರಸ್ಸುಗಳನ್ನು ನೀಡಲು ಶ್ರೀ ಪಿ.ಎಸ್.ಎಸ್.ಥಾಮಸ್ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಸದರಿಯವರು ನೀಡಿದ ವರದಿಯ ಹಿನ್ನಲೆಯಲ್ಲಿ ಆದೇಶ ಸಂಖ್ಯೆ: ಕಾಇ 118 ಇಟಿಐ 2010 ಬೆಂಗಳೂರು, ದಿನಾಂಕ: 30.08.2010ರಲ್ಲಿ ರಾಜ್ಯದ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ವಿದ್ಯಾರ್ಥಿ ಕೇಂದ್ರೀಕೃತ ಸಹಾಯಾನುದಾನ ಪದ್ಧತಿಯನ್ನು ದಿನಾಂಕ: 01.04.2010 ರಿಂದ ಜಾರಿಗೆ ತರಲು ಮಂಜೂರಾತಿ ನೀಡಲಾಗಿರುತ್ತದೆ.

ವಿದ್ಯಾರ್ಥಿ ಕೇಂದ್ರೀಕೃತ ಅನುದಾನದಡಿಯಲ್ಲಿ ಐದು ವರ್ಷ ಎನ್.ಸಿ.ವಿ.ಟಿ ಸಂಯೋಜನೆ ಪೂರೈಸಿರುವಿಕೆ, ವಿದ್ಯಾರ್ಥಿಗಳ ಹಾಜರಾತಿ ಹಾಗೂ ಉತ್ತೀರ್ಣತೆಯ ಶೇಕಡವಾರು ಪ್ರಮಾಣ, ಡಿ.ಜಿ.ಟಿ ನಿಯಮಗಳ ಅನುಸಾರ ಅರ್ಹ ಸಿಬ್ಬಂದಿಗಳ ಇರುವಿಕೆ, ಡಿ.ಜಿ.ಟಿ ಪಠ್ಯಕ್ರಮದಂತೆ ಶೇ.100 ರಷ್ಟು ಯಂತ್ರೋಪಕರಣಗಳ ಲಭ್ಯತೆ, ಸಂಸ್ಥೆಯಲ್ಲಿ ಪ್ಲೇಸ್‌ಮೆಂಟ್ ಸೆಲ್ ಸ್ಥಾಪನೆ ಹಾಗೂ ಇತರ ಅಂಶಗಳನ್ನು ಆಧರಿಸಿ ಅನುದಾನವನ್ನು ಕೈಗಾರಿಕಾ ತರಬೇತಿ ಸಂಸ್ಥೆಗೆ ನೀಡಲು ಅವಕಾಶವಿರುತ್ತದೆ. ಇದರಿಂದ ತರಬೇತುದಾರರ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಜವಾಬ್ದಾರಿ ತರಬೇತಿ ಸಂಸ್ಥೆಗಳ ಮೇಲೆ ಇರುತ್ತದೆ.

--2

ವಿದ್ಯಾರ್ಥಿ ಕೇಂದ್ರೀಕೃತ ಅನುದಾನ ಪದ್ಧತಿಯಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳ ತರಬೇತುದಾರರ ಗುಣಮಟ್ಟವನ್ನು ಹೆಚ್ಚಿಸುವ ಅವಕಾಶವಿರುವುದರಿಂದ ಹಾಗೂ ಸಂಸ್ಥೆಯನ್ನು ಆರ್ಥಿಕವಾಗಿ ಸಬಲಗೊಳಿಸುವ ಉದ್ದೇಶ ಒಳಗೊಂಡಿರುವುದರಿಂದ ವಿದ್ಯಾರ್ಥಿ ಕೇಂದ್ರೀಕೃತ ಅನುದಾನ ಪದ್ಧತಿಯನ್ನು ಹಿಂಪಡೆಯಲು ಉದ್ದೇಶಿಸಿರುವುದಿಲ್ಲ.

* * * *

**ಕೌಉಜೀಇ 14 ಕೈತಪ್ರ 2022**

**(ಡಾ.ಸಿ.ಎನ್.ಅಶ್ವತ್ಥ ನಾರಾಯಣ)**
**ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು**
**ತಂತ್ರಜ್ಞಾನ, ವಿದ್ಯುನ್ಮಾನ ಮತ್ತು**
**ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು**
**ಜೀವನೋಪಾಯ ಸಚಿವರು**